ಈ. ಬ್ಯಾಂಕು ಕರ್ನಾಟಕ ಸಹಕಾರ ಸಂಘಗಳ ನಿಯಮ 17ನ್ನು ಉಲ್ಲಂಘಿಸಿ, ಮಂಜೂರಾದ ಸಿಬ್ಬಂದಿ ಬಲಕ್ಕಿಂತ ಅಧಿಕವಾಗಿ ನೇಮಕಾತಿ ಮಾಡಿಕೊಂಡಿದೆ.. ಈ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನು ಪರಿಶೀಲಿಸುತ್ತಿದೆ.

ಉ. ಇಲ್ಲ.

ಊ. ಕಿರಿಯ ಸಹಾಯಕರ ಹುದ್ದೆಗೆ ಇಬ್ಬರನ್ನು ನೇಮಕ ಮಾಡಲಾಗಿದೆ.

ಋ. ಇಲ್ಲ

ರಾಜ್ಯದಲ್ಲಿ ತೋಟಗಾರಿಕಾ ಉತ್ಪಾದನಾ ಅಭಿವೃದ್ಧಿಗೆ ಇರುವ ಅವಕಾಶ

(1373): ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):– ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಹಣ್ಣು, ತರಕಾರಿ ಮತ್ತು ಹೂವು ಉತ್ಪಾದನೆ ದೃಷ್ಟಿಯಿಂದ ತೋಟಗಾರಿಕೆ ಅಭಿವೃದ್ಧಿಗೆ ವಿಪುಲ ಅವಕಾಶವಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಹಾಗಿದ್ದಲ್ಲಿ ರಫ್ತು ಮಾಡಬಹುದಾದ ಈ ಉತ್ಪನ್ನಗಳಿಗಾಗಿ ವ್ಯಾಪಕ ಮಾರಾಟ ನಿಗಮ ಆರಂಭಿಸಲು ಸರ್ಕಾರವು ಪರಿಗಣಿಸುವುದೇ;

ಇ. ನೆದರ್‌ಲ್ಯಾಂಡ್‌ನಲ್ಲಿರುವಂತೆ ಹೂದೋಟ ಮತ್ತು ಪುಷ್ಪ ಪ್ರದರ್ಶನಗಳನ್ನು ವೈಜ್ಞಾನಿಕವಾಗಿ ಮತ್ತು ವಿವೇಚನೆಯಿಂದ ಆಧುನೀಕರಿಸಿ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಪ್ರವಾಸಿಗಳನ್ನು ಆಕರ್ಷಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. ಹೌದು.

ಆ. ರಫ್ತು ಮಾಡಬಹುದಾದ ತೋಟಗಾರಿಕೆ ಉತ್ಪನ್ನಗಳಿಗಾಗಿ ಮಾರಾಟ ನಿಗಮ ಆರಂಭಿಸುವ ಪ್ರಸ್ತಾವನೆ ಸರ್ಕಾರದಲ್ಲಿ ಇರುವುದಿಲ್ಲ. ಆದರೂ, ತೋಟಗಾರಿಕೆ ಉತ್ಪನ್ನಕ್ಕೆ ಬೆಳೆಗಾರರಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ಸರಕಾರವು ಹಾಪ್ ಕಾಮ್ಸ್ ಮತ್ತು ಜಿಲ್ಲಾ ತೋಟಗಾರಿಕೆ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘಗಳಿಗೆ ಉತ್ತೇಜನ ನೀಡುತ್ತಿದೆ. ಈ ಸಂಘಗಳನ್ನು ಬಲಗೊಳಿಸಲು ಎನ್.ಸಿ.ಡಿ.ಸಿ. ಮತ್ತು ಎನ್.ಹೆಚ್.ಬಿ. ಸಂಸ್ಥೆಗಳು ಸಾಲ ಮತ್ತು ರಿಯಾಯಿತಿ ಮೂಲಕ ಧನ ಸಹಾಯ ಒದಗಿಸಲು ಮುಂದೆ ಬಂದಿವೆ.

ಇ. ನೆದರ್‌ಲ್ಯಾಂಡ್‌ನಲ್ಲಿರುವಂತೆ ಹೂದೋಟ ಮತ್ತು ಪುಷ್ಪ ಪ್ರದರ್ಶನಗಳನ್ನು ಆಧುನೀಕರಿಸುವ ಯೋಜನೆಯು ಸರ್ಕಾರದ ಮುಂದಿರುವುದಿಲ್ಲ.

ಗೊರೂರು ತೋಟಗಾರಿಕೆ ಫಾರಂನ ತಂತಿ ಬೇಲಿ ಕಳುವಾಗಿರುವ ಬಗ್ಗೆ

(1443): ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):– ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಅರಕಲಗೂಡು ತಾಲ್ಲೂಕು, ಗೊರೂರು ಬಳಿ ಇರುವ ತೋಟಗಾರಿಕೆ ಫಾರಂನಲ್ಲಿದ್ದ ಸುಮಾರು

65 ಎಕರೆ ಪ್ರದೇಶಕ್ಕೆ ಹಾಕಿದ್ದ ತಂತಿ ಬೇಲಿ ಕಳುವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿರುತ್ತದೆಯೇ;

ಆ. ಬಂದಿದ್ದರೆ ಯಾವಾಗ ಬಂದಿರುತ್ತದೆ. ಮತ್ತು ಯಾರ ಮೇಲೆ ಕ್ರಮಕೈಗೊಳ್ಳಲಾಗಿದೆ;

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. ಈ ಕ್ಷೇತ್ರವು ತೋಟಗಾರಿಕೆ ಇಲಾಖೆಯ ವಶಕ್ಕೆ ಹಾಸನ ಜಿಲ್ಲಾ ಪರಿಷತ್ತಿನಿಂದ ದಿನಾಂಕ 9.6.1988 ರಂದು ವರ್ಗಾವಣೆಯಾಯಿತು. ಈ ಕ್ಷೇತ್ರವನ್ನು ತೋಟಗಾರಿಕೆ ಇಲಾಖೆಯ ವಶಕ್ಕೆ ತೆಗೆದುಕೊಳ್ಳುವಾಗ ಆದಕ್ಕೆ ತಂತಿ ಬೇಲಿ ಯಾವುದೂ ಇರಲಿಲ್ಲ.

ಆ. ಉದ್ಭವಿಸುವುದಿಲ್ಲ.

ಮಹಾಮಸ್ತಕಾಭಿಷೇಕಕ್ಕೆ ರಾಜ್ಯ ಹಾಗೂ ಕೇಂದ್ರದ ಸಹಾಯಧನ

(2057): ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಶ್ರವಣ ಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕವು ಯಾವ ತಿಂಗಳಲ್ಲಿ ನಡೆಯಲಿದೆ;

ಆ. ಈ ಮಹಾಮಸ್ತಕಾಭಿಷೇಕಕ್ಕೆ ರಾಜ್ಯ ಸರ್ಕಾರವು ಹಾಗೂ ಕೇಂದ್ರ ಸರ್ಕಾರವು ನೀಡಿರುವ ಸಹಾಯಧನ ಎಷ್ಟು;

ಇ. ಈ ಮಹಾ ಮಸ್ತಕಾಭಿಷೇಕಕ್ಕೆ ಬರುವಾರಿಯನ್ನು ನೋಡಿಕೊಳ್ಳುವ ಸಲುವಾಗಿ ಸರ್ಕಾರದ ವತಿಯಿಂದ ವಿಶೇಷ ಅಧಿಕಾರಿಯನ್ನು ನೇಮಕ ಮಾಡಲಾಗಿದೆಯೇ; ಹಾಗಿದ್ದಲ್ಲಿ ಮಹಾ ಮಸ್ತಕಾಭಿಷೇಕದ ವಿಶೇಷ ಅಧಿಕಾರಿಯವರಿಗೆ ಎಷ್ಟು ಜನ ಸಿಬ್ಬಂದಿ ವರ್ಗದವರನ್ನು ಒದಗಿಸಲಾಗಿದೆ;

ಈ. ಇಲ್ಲದಿದ್ದಲ್ಲಿ ವಿಶೇಷ ಅಧಿಕಾರಿಯವರಿಗೆ ಸಿಬ್ಬಂದಿಯನ್ನು ಒದಗಿಸಿ, ವಿಶೇಷ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅಗತ್ಯ ನಿರ್ವಹಿಸಲು ಶ್ರವಣಬೆಳಗೊಳಕ್ಕೆ ಹತ್ತಿರವಿರುವ ಚನ್ನರಾಯಪಟ್ಟಣ ಅಥವಾ ಹಾಸನ ನಗರದಲ್ಲಿ ಕಛೇರಿ ಸೌಲಭ್ಯವನ್ನು ಒದಗಿಸಿಕೊಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ಪಾಪಣ್ಣಶೇಖರಮೂರ್ತಿ (ಕಂದಾಯ ಸಚಿವರು):–

ಅ. 1993ರ ಡಿಸೆಂಬರ್ ಮಾಹೆಯಲ್ಲಿ ಆಚರಿಸಲು ಉದ್ದೇಶಿಸಿದೆ.

ಆ. 1992–93ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಮಹಾಮಸ್ತಕಾಭಿಷೇಕ ಲೆಕ್ಕ ಶೀರ್ಷಿಕೆಯಲ್ಲಿ 50 ಕೋಟಿ ರೂ.ವನ್ನು ಒದಗಿಸಿದೆ. ಇದಲ್ಲದೆ ರಾಜ್ಯ ಸಾದಿಲ್ವಾರು ನಿಧಿಯಿಂದ ಕುಡಿಯುವ ನೀರಿನ ವ್ಯವಸ್ಥೆಗಾಗಿ 242.00 ಲಕ್ಷಗಳನ್ನು ಮತ್ತು ಅತಿಥಿ ಗೃಹಗಳ ನಿರ್ಮಾಣ ಹಾಗೂ ರಸ್ತೆಗಳ ಕಾಮಗಾರಿಗಾಗಿ 2.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಂಡಿದೆ. 1993–94ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಮಹಾಮಸ್ತಕಾಭಿಷೇಕ ಲೆಕ್ಕ ಶೀರ್ಷಿಕೆಯಲ್ಲಿ 5.00 ಕೋಟಿ ರೂ.ಗಳನ್ನು ಒದಗಿಸಿರುತ್ತದೆ. 1993–94ನೇ ಸಾಲಿನ ವಿವಿಧ ಇಲಾಖೆಗಳ ಕಾಮಗಾರಿಗಾಗಿ ಪ್ರಸ್ತಾವನೆ ಬಂದಿದ್ದು ಇದರ ಪೆಚ್ಚು ಅಂದಾಜು 8.00 ಕೋಟಿಗಳಷ್ಟು ಆಗಿರುತ್ತದೆ. ಹೆಚ್ಚುವರಿ ಹಣವನ್ನು ಆರ್ಥಿಕ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಕೇಂದ್ರ ಸರ್ಕಾರವು